# ಮೈಸೂರು ವಾರಿಯರ್ಸ್ ತಂಡಕ್ಕೆ ಆಟಗಾರರ ಆಯ್ಕೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಎಸ್‌ಡಿಎನ್‌ಆರ್ ಮೈದಾನದಲ್ಲಿ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡದ ಮಾಲೀಕರಾದ ಎನ್. ಆರ್. ಸಮೂಹ ಕ್ರಿಕೆಟ್ ಟ್ಯಾಲಂಟ್ ಹಂಟ್ ಪ್ರತಿಭಾನ್ವೇಷಣೆ ಶಿಬಿರವನ್ನು ಏರ್ಪಡಿಸಿತ್ತು.



ಗ್ರಾಮೀಣ ಭಾಗದಲ್ಲಿರುವ ಕ್ರಿಕೆಟ್ ಪ್ರತಿಭೆಗಳನ್ನು ಬೆಳೆಸಲು, ಸಣ್ಣ ಪಟ್ಟಣಗಳಲ್ಲಿನ ಪ್ರತಿಭೆಗಳನ್ನು ಗುರುತಿಸಿ ಉತ್ತೇಜನ ನೀಡಲು ಈ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶದವರಿಗಾಗಿಯೇ ವಿಶೇಷವಾಗಿ ಹಮ್ಮಿಕೊಳ್ಳಲಾಗಿತ್ತು.



ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಆಟಗಾರರು ಮುಂಬರುವ ಕೆಪಿಎಲ್‌ನಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಟ್ಯಾಲೆಂಟ್ ಹಂಟ್‌ನಲ್ಲಿ ಮಂಡ್ಯ, ರಾಮನಗರ, ಚಾಮರಾಜನಗರ ಮತ್ತು ಮೈಸೂರು ಸೇರಿದಂತೆ ಸುಮಾರು 92 ಜನರ ಸಕ್ರಿಯ ಸಹಭಾಗಿತ್ವ ಕಂಡುಬಂತು. ಇದರಲ್ಲಿ 40 ಬೌಲರ್‌ಗಳು, 14 ಬ್ಯಾಟ್ಸ್‌ಮನ್‌ಗಳು, 30 ಆಲ್‌ರೌಂಡರ್‌ಗಳು ಮತ್ತು 8 ವಿಕೆಟ್ ಕೀಪರ್ ಕಂ ಬ್ಯಾಟ್ಸ್‌ಮನ್‌ಗಳು ಸ್ಪರ್ಧಿಸಿದರು. ಆರಂಭಿಕ ಸುತ್ತುಗಳ ಕೊನೆಯಲ್ಲಿ, 24 ಆಟಗಾರರನ್ನು ಆರಿಸಿಕೊಳ್ಳಲಾಯಿತು. ಅವರನ್ನು ಟಿ20 ಪಂದ್ಯಕ್ಕೆ ಎರಡು ತಂಡಗಳಾಗಿ ವಿಂಗಡಿಸಲಾಯಿತು.

ಆಯ್ಕೆಯಾದ ಆಟಗಾರರು ತರಬೇತಿ ಪಡೆದು ಅವರಲ್ಲಿ ಇಬ್ಬರು ಆಟಗಾರರಾದ ನಂದ ಕಿಶೋರ್ ಜೊ ಜೊ ಕ್ರಿಕೆಟ್ ಕ್ಲಬ್ ಹಾಗೂ ಶ್ರೇಯಸ್ ಎನ್ ಅವರು ಕೊನೆಯ ಸುತ್ತಿನಲ್ಲಿ ಆಯ್ಕೆಯಾಗಿದ್ದಾರೆ. ಈ ಇಬ್ಬರು ಆಟಗಾರರು ಮುಂಬರುವ ಕೆಪಿಎಲ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸುತ್ತಾರೆ.

ಅಲ್ಲದೇ, ಅವರಿಗೆ ಆ.25 ರಿಂದ ಸೆ.5 ರವರೆಗೆ ನಡೆಯಲಿರುವ ಮೈಸೂರು ವಾರಿಯರ್ಸ್‌ನ ಅಭ್ಯಾಸದಲ್ಲಿ ಭಾಗವಹಿಸಲು ಅವಕಾಶ ಸಿಗುತ್ತದೆ. ಆಯ್ಕೆಯಾದ ಆಟಗಾರರ ಹೆಸರುಗಳನ್ನು ಮೈಸೂರು ವಾರಿಯರ್ಸ್‌ನ ಅಧಿಕೃತ ತಂಡವಾಗಿ ಸೆ.7ರಂದು ಘೋಷಿಸಲಾಗುವುದು.